ಆ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು 2006–07 ನೇ ಸಾಲಿನಲ್ಲಿ ಪ್ರಾರಂಭಿಸಲು 4 ಪ್ರತ್ಯೇಕ ಸರ್ಕಾರದ ಆದೇಶಗಳಲ್ಲಿ ಮಂಜೂರಾತಿ ನೀಡಲಾಗಿದೆ. ಪ್ರಥಮ ಪಿ.ಯು ತರಗತಿಯ ದಾಖಲಾತಿಗೆ ದಿನಾಂಕ : 31–08–2006 ರಂದು ಕೊನೆಯ ದಿನಾಂಕವೆಂದು ನಿಗದಿಪಡಿಸಲಾಗಿತ್ತು. ಸದರಿ ದಿನಾಂಕದ ನಂತರ ಮಂಜೂರಾತಿ ನೀಡಲಾದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭವಾಗಿರುವುದಿಲ್ಲ.

ಇ) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನಲ್ಲಿ ಈಗಾಗಲೇ 09 ಪದವಿ ಪೂರ್ವ ಕಾಲೇಜುಗಳಿದ್ದು, ಇವುಗಳಲ್ಲಿ 03 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಇವೆ. ಈ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿಯೇ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳ ದಾಖಲಾತಿಗೆ ಅವಕಾಶವಿದೆ. ಅಲ್ಲದೆ ಡಾ॥ ನಂಜುಂಡಪ್ಪ ವರದಿಯನ್ವಯ ಕುಂದಗೋಳ ತಾಲ್ಲೂಕು ಮುಂದುವರಿದ ತಾಲ್ಲೂಕುಗಳ ಪಟ್ಟಿಯಲ್ಲಿದೆ. ಅದುದರಿಂದ ಇಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡುವಲ್ಲಿ ಹೆಚ್ಚಿನ ಆದ್ಯತೆ ನೀಡಿರುವುದಿಲ್ಲ.

ಈ) ಡಾ॥ ನಂಜುಂಡಪ್ಪನವರ ವರದಿಯನ್ವಯ ಹಿಂದುಳಿದ ಪ್ರದೇಶಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಇದಲ್ಲದೆ ಕೋರಿಕೆ ಬಂದಿರುವ ಪ್ರದೇಶಗಳಲ್ಲಿನ ಪದವಿ ಪೂರ್ವ ಕಾಲೇಜಿನ ಶೈಕ್ಷಣಿಕ ಅಗತ್ಯತೆ, ಕಟ್ಟಡ ಮತ್ತು ಇತರ ಮೂಲಭೂತ ಸೌಲಭ್ಯದ ಲಭ್ಯತೆ, ವಿದ್ಯಾರ್ಥಿಗಳ ದಾಖಲಾತಿಯ ಅಂದಾಜು ಮಾಹಿತಿ ಹಾಗೂ ಆಯವ್ಯಯದಲ್ಲಿ ಹಣಕಾಸಿನ ಲಭ್ಯತೆಯನ್ವಯ ಹಂತಹಂತವಾಗಿ ಮಂಜೂರು ಮಾಡಲಾಗುತ್ತಿದೆ.

1561 (1902) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುದ್ದೇಬಿಹಾಳ ತಾಲ್ಲೂಕು ವ್ಯಾಪ್ತಿಯಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಪ್ರಸ್ತುತ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು ;

ಆ) ಅವುಗಳನ್ನು, ತುಂಬಲು ಸರ್ಕಾರದ ಸಕಾಲಿಕ ಕ್ರಮಗಳೇನು;

ಇ) ಹಿಂದುಳಿದ ಈ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳ ಸರ್ಕಾರಿ ಶಾಲೆಗಳಿಗೆ ಸಿಬ್ಬಂದಿ ಮತ್ತು ಅವಶ್ಯಕ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು ಸರ್ಕಾರದ ಆದ್ಯತಾ ಕ್ರಮಗಳೇನು ?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) **ಖಾಲಿ ಇರುವ ಹುದ್ದೆಗಳು**

☞ **ಸರ್ಕಾರಿ ಪ್ರಾಥಮಿಕ ಶಾಲೆ :**

ಸಹ ಶಿಕ್ಷಕರು : 31

ಮುಖ್ಯ ಶಿಕ್ಷಕರು : 10

☞ **ಸರ್ಕಾರಿ ಪ್ರೌಢ ಶಾಲೆ :**

ಸಹ ಶಿಕ್ಷಕರು : 05

ಮುಖ್ಯ ಶಿಕ್ಷಕರು : 05

☞ **ಬೋಧಕೇತರ ಹುದ್ದೆಗಳು :**

'ಡಿ' ಗ್ರೂಪ್ : 03

ಆ) ☞ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಸಹ ಶಿಕ್ಷಕರ ಹುದ್ದೆಗಳನ್ನು ತುಂಬಲು ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗಿದೆ. ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ , ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಹಜ ಪ್ರಕಟಿಸಿದೆ. ಶೀಘ್ರದಲ್ಲಿಯೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

☞ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಮುಖ್ಯ ಶಿಕ್ಷಕರ ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲಾಗುವುದು.

☞ ಸರ್ಕಾರಿ ಪ್ರೌಢ ಶಾಲೆಗಳಲ್ಲಿನ ಮುಖ್ಯ ಶಿಕ್ಷಕರ ಹುದ್ದೆಗಳನ್ನು ತುಂಬಲು ಈಗಾಗಲೇ ಲೋಕಸೇವಾ ಆಯೋಗದಿಂದ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದೆ.

☞ 'ಡಿ' ದರ್ಜೆ ನೌಕರರ ಹುದ್ದೆಯನ್ನು ಅನುಕಂಪದ ಆಧಾರದ ನೇಮಕಾತಿ ಮೂಲಕ ಭರ್ತಿ ಮಾಡಲಾಗುವುದು.

ಇ) ಅವಶ್ಯಕ ಮೂಲಭೂತ ಸೌಕರ್ಯಗಳಿಗೆ ಆರ್.ಐ.ಡಿ.ಎಫ್ 10 ಹಾಗೂ 12 ರಡಿಯಲ್ಲಿ ಅನುದಾನ ಒದಗಿಸಲಾಗಿದೆ. ಆರ್.ಐ.ಡಿ.ಎಫ್ –13 ರಡಿ ಕಾರ್ಯಕ್ರಮ ರೂಪಿಸಲಾಗುತ್ತಿದೆ. ಹಾಗೂ ಅನುದಾನ ಲಭ್ಯತೆಯ ಆಧಾರದ ಮೇಲೆ ಹಂತಹಂತವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು ಕ್ರಮ ಕೈಗೊಳ್ಳಲಾಗುವುದು.

1562 (1903) ಶ್ರೀ ಸಿ. ಎಸ್. ನಾಡಗೌಡ (ಅಪ್ಪಾಜಿ) :– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾರಾಯಣಪೂರ ಜಲಾಶಯದ ಹಿನ್ನೀರು ಪ್ರದೇಶದಲ್ಲಿ ಹೆಚ್ಚುವರಿಯಾಗಿ ಮುಳುಗಡೆಯಾದ ಜಮೀನುಗಳ ವಿಸ್ತೀರ್ಣ ಎಷ್ಟು;

ಆ) ಮುಳುಗಡೆಯಿಂದ ತೊಂದರೆಗೀಡಾದ ರೈತರುಗಳಿಗೆ ನಿಗದಿಪಡಿಸಲಾದ ಎಲ್ಲಾ ಸೌಲಭ್ಯ ಪರಿಹಾರಗಳನ್ನು ನೀಡಲಾಗಿದೆಯೇ;

ಇ) ಇಲ್ಲವಾದಲ್ಲಿ, ಪರಿಹಾರ ನೀಡಿಕೆಯಲ್ಲಿನ ವಿಳಂಬಕ್ಕೆ ಕಾರಣಗಳೇನು;

ಈ) ಜಮೀನು ಮುಳುಗಡೆಯಿಂದಾಗಿ ಸಂಕಷ್ಟಕ್ಕೆ ಒಳಗಾಗಿರುವ ರೈತರಿಗೆ ತೀವ್ರಗತಿಯಲ್ಲಿ ಪರಿಹಾರ ಸೌಲಭ್ಯಗಳನ್ನು ನೀಡಲು ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು):

ಅ) ನಾರಾಯಣಪೂರ ಜಲಾಶಯ ಅಡಿ ಮುಳುಗಡೆಯಾದ ಪ್ರದೇಶದಲ್ಲಿ ಹೆಚ್ಚುವರಿಯಾಗಿ ಮುಳುಗಡೆಯಾದ ಬಗ್ಗೆ ಹಲವಾರು ಗ್ರಾಮದ ರೈತರು ಅರ್ಜಿಗಳನ್ನು ಸಲ್ಲಿಸುತ್ತಿರುವ ಹಿನ್ನೆಲೆಯಲ್ಲಿ ಪುನಃ ಎಫ್.ಆರ್.ಎಲ್. ಸರ್ವೆ ಕಾರ್ಯ ಕೈಗೊಂಡಿದ್ದು, ಮಾರ್ಚ್ 2007 ರೊಳಗಾಗಿ ಪೂರ್ಣಗೊಳ್ಳುವುದು. ಸರ್ವೆ ಮುಗಿದ ನಂತರ